ಡಾ॥ ಉಮೇಶ್ ಜಿ. ಜಾಧವ್:– ಅವೆಲ್ಲಾ ಚರ್ಚೆ ಮಾಡಿದ್ದೇವೆ.

ಅಧ್ಯಕ್ಷರು:– ಹೇಳಿ, ಪರಿಶೀಲನೆ ಮಾಡುತ್ತೇವೆಂದು ಹೇಳಿ.

ಶ್ರೀ ಕೃಷ್ಣ ಬೈರೇಗೌಡ (ಮಾನ್ಯ ಕೃಷಿ ಸಚಿವರು) (ಮಾನ್ಯ ಸಾರಿಗೆ ಸಚಿವರ ಪರವಾಗಿ):– ಮಾನ್ಯ ಸಭಾಧ್ಯಕ್ಷರೆ, ಇವರದು ಗಡಿ ಕ್ಷೇತ್ರವಾಗಿರುವುದರಿಂದ ಸ್ವಲ್ಪ ಆಂಧ್ರಪ್ರದೇಶದ ಜೊತೆಗೆ ಜನಗಳಿಗೆ ನಿಕಟ ಸಂಪರ್ಕ ಹೋಗಿ ಬರುವುದಕ್ಕೆ ಮಾನ್ಯ ಶಾಸಕರು ಕೇಳುತ್ತಿದ್ದಾರೆ. ಆ ಆಂಧ್ರಪ್ರದೇಶ ವಿಭಜನೆ ಆಗಿ ಎರಡು ರಾಜ್ಯ ರಚನೆಯಾದ ನಂತರ ತೆಲಂಗಾಣದ ಜೊತೆಗೆ ನಾವು ಒಡಂಬಡಿಕೆಯನ್ನು ಮಾಡಿಕೊಳ್ಳುವುದು ಆಗಬೇಕಾಗಿದೆ. ಆ ಪ್ರಕ್ರಿಯೆ ಚಾಲನೆಯಲ್ಲಿದೆ. ಅವರೊಂದಿಗೆ ನಾವು ಸಂಧಾನ ಮಾಡುತ್ತಿದ್ದೇವೆ. ಒಡಂಬಡಿಕೆ ಆದಕೂಡಲೆ, ಆ ಒಡಂಬಡಿಕೆಯ ಹಿನ್ನೆಲೆಯಲ್ಲಿ ಇವರು ಹೆಚ್ಚುವರಿ root ಗಳನ್ನು ಏನು ಕೇಳಿದ್ದಾರೆ, ಅದನ್ನು ಆ ಒಡಂಬಡಿಕೆ ಆದಮೇಲೆ ಅದನ್ನು ಖಂಡಿತವಾಗಿಯೂ ಪರಿಗಣಿಸುತ್ತೇವೆ.

ಅಧ್ಯಕ್ಷರು:– ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್

ಪಡಿತರ ಚೀಟಿ

56(1128); ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್(ನಿಪ್ಪಾಣಿ)

ಅ) ನಿಪ್ಪಾಣಿ ಮತಕ್ಷೇತ್ರದ ವ್ಯಾಪ್ತಿಯಲ್ಲಿರುವ ವಿವಿಧ ಬಗೆಯ ಪಡಿತರ ಚೀಟಿಗಳು ಎಷ್ಟು; ಅವುಗಳಲ್ಲಿ ಮಂಜೂರಾಗಿರುವ, ಹಂಚಿಕೆಯಾಗಿರುವ ಹಾಗೂ ಹಂಚಿಕೆಯಾಗದೇ ಇರುವ ಸಂಖ್ಯೆ ಎಷ್ಟು (ಗ್ರಾಮವಾರು ವಿವರ ನೀಡುವುದು)

ಆ) ತಾಲ್ಲೂಕಿನ ವ್ಯಾಪ್ತಿಯಲ್ಲಿ ಪಡಿತರ ಚೀಟಿಗಳ ಹಂಚಿಕೆಯಲ್ಲಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಯಾವ ಕಾರಣಕ್ಕೆ ವಿಳಂಬವಾಗುತ್ತಿದೆ. ಅದಕ್ಕೆ ಕೈಗೊಂಡಿರುವ ಪರಿಹಾರವೇನು;

ಇ) ಪಡಿತರ ಚೀಟಿಯ ಹಂಚಿಕೆ, ಮಂಜೂರು ಹಾಗೂ ವಿತರಣೆ ಮಾಡುವಲ್ಲಿ ಪಾರದರ್ಶಕತೆಯನ್ನು ಸರ್ಕಾರವು ಅಳವಡಿಸುವುದೇ, ಹಾಗಿದ್ದಲ್ಲಿ ಯಾವ ರೀತಿಯಲ್ಲಿ ಕ್ರಮ ಕೈಗೊಳ್ಳಲಾಗಿದೆ; ಯಾವಾಗ ಅನುಷ್ಠಾನಕ್ಕೆ ತರಲಾಗುವುದು;

ಈ) ಹೊಸ ಪಡಿತರ ಚೀಟಿಯನ್ನು ಪಡೆಯಲು ಅನುಸರಿಸಬೇಕಾಗಿರುವ ಮಾನದಂಡಗಳೇನು;

ಉ) ನಿಪ್ಪಾಣಿ ಮತಕ್ಷೇತ್ರದಲ್ಲಿ ಬಾಕಿ ಇರುವ ಪಡಿತರ ಅರ್ಜಿಗಳ ಸಂಖ್ಯೆ ಎಷ್ಟು ಗ್ರಾಮವಾರು ಮಾಹಿತಿ ನೀಡುವುದು)?

ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು)

ಅ) ನಿಪ್ಪಾಣಿ ಮತಕ್ಷೇತ್ರದಲ್ಲಿ 2,734 ಅಂತ್ಯೋದಯ, 49,759 ಬಿ.ಪಿ.ಎಲ್ ಹಾಗೂ 34,706 ಎ.ಪಿ.ಎಲ್ ಹೀಗೆ ಒಟ್ಟು 87,199 ಪಡಿತರ ಚೀಟಿಗಳು ಚಾಲ್ತಿಯಲ್ಲಿರುತ್ತವೆ. ನಿಪ್ಪಾಣಿ ಮತಕ್ಷೇತ್ರದಲ್ಲಿ ಚಾಲ್ತಿಯಲ್ಲಿರುವ, ವಿತರಣೆಯಾಗಿರುವ ಹಾಗೂ ವಿತರಣೆಗೆ ಸಿದ್ಧವಿರುವ ಪಡಿತರ ಚೀಟಿಗಳ ಗ್ರಾಮವಾರು ವಿವರ ಈ ಪತ್ರಕ್ಕೆ ಲಗತ್ತಿಸಿದೆ.

ಆ) ಗ್ರಾಮಾಂತರ ಪ್ರದೇಶದ ಫಲಾನುಭವಿಗಳಿಗೆ ತಾಲ್ಲೂಕು ಮಟ್ಟದಲ್ಲಿ ಆಯಾ ಗ್ರಾಮ ಪಂಚಾಯಿತಿಗಳಲ್ಲಿ ಪಡಿತರ ಚೀಟಿಗಳ ವಿತರಣಾ ಕಾರ್ಯ ಕೈಗೊಳ್ಳಲು ಕ್ರಮ ವಹಿಸಲಾಗಿದೆ. ನಗರ ಮತ್ತು ಪಟ್ಟಣ ಪ್ರದೇಶಗಳ ಹೊಸ ಪಡಿತರ ಚೀಟಿಗಳ ವಿತರಣಾ ಕಾರ್ಯ ತಹಶೀಲ್ದಾರರ ಕಚೇರಿಯಲ್ಲಿ ಕೈಗೊಳ್ಳಲಾಗಿದೆ. ಸರ್ಕಾರದ ನಿರ್ದೇಶನದ ಅನುಸಾರ ಅರ್ಜಿಗಳನ್ನು ನ್ಯಾಯಬೆಲೆ ಅಂಗಡಿ ಮಟ್ಟದ ಅಧಿಕಾರಿಗಳಿಂದ ಪರಿಶೀಲಿಸಿ ಅರ್ಜಿದಾರರ ಅರ್ಹತೆಯ ಅನುಸಾರ ಹೊಸ ಪಡಿತರ ಚೀಟಿಗಳು ವಿತರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದಷ್ಟು ವಿಳಂಬಕ್ಕೆ ಅವಕಾಶ ನೀಡದಂತೆ ಪಡಿತರ ಚೀಟಿ ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಸರ್ಕಾರದ ನಡವಳಿ ಸಂಖ್ಯೆ: ಆನಾಸ/80/ಡಿಆರ್‌ಎ/2012 ದಿನಾಂಕ: 24.08.2012ರ ಮಾನದಂಡಗಳನ್ವಯ ನಿಯಮಾನುಸಾರ ಬಿ.ಪಿ.ಎಲ್ ಮತ್ತು ಎ.ಪಿ.ಎಲ್ ಪಡಿತರ ಚೀಟಿಯನ್ನು ವಿತರಿಸಲು ಕ್ರಮ ವಹಿಸಲಾಗುತ್ತಿದೆ. ಪಡಿತರ ಚೀಟಿದಾರರಿಗೆ ಆಹಾರ ಧಾನ್ಯಗಳನ್ನು ಹಂಚಿಕ ನೀಡುವ ಬಗ್ಗೆ ಪಾರದರ್ಶಕತೆಯನ್ನು ತರುವ ಸಲುವಾಗಿ ಪ್ರತಿ ನ್ಯಾಯಬೆಲೆ ಅಂಗಡಿಗಳಲ್ಲಿ ಪ್ರತಿ ಮಾಹೆ ಅರ್ಹ ಫಲಾನುಭವಿಗಳ ಪಟ್ಟಿಯನ್ನು ನ್ಯಾಯಬೆಲೆ ಅಂಗಡಿಗಳಲ್ಲಿ ಪ್ರದರ್ಶಿಸುವ ಹಾಗೂ ಪಡಿತರ ಚೀಟಿದಾರರು ಆಹಾರ ಧಾನ್ಯವನ್ನು ಪಡೆಯುವ ವೇಳೆ ಪಟ್ಟಿಯಲ್ಲಿ ಸಹಿ ಮಾಡುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ ಹಾಗೂ ನ್ಯಾಯಬೆಲೆ ಅಂಗಡಿಗಳಲ್ಲಿ ಇರುವ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸಾರ್ವಜನಿಕರ ಮಾಹಿತಿಗಾಗಿ ಪ್ರದರ್ಶಿಸಲಾಗುತ್ತಿದ್ದು. ನ್ಯಾಯಬೆಲೆ ಅಂಗಡಿಯಲ್ಲಿ ಇರುವ ಅನರ್ಹ ಪಡಿತರ ಚೀಟಿದಾರರ ಮಹಿತಿಯನ್ನು ಸಾರ್ವಜನಿಕರು ಇಲಾಖೆಗೆ ಒದಗಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ. ಮತ್ತು ಇಲಾಖೆಯ ವೆಬ್ ಸೈಟ್‌ನಲ್ಲಿ ಎಲ್ಲಾ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಸಾರ್ವಜನಿಕರ ಮಾಹಿತಿಗಾಗಿ ಒದಗಿಸಲಾಗಿದೆ.

ಈ) ಸರ್ಕಾರದ ನಡವಳಿ ಸಂಖ್ಯೆ: ಆನಾಸ/80/ಡಿಆರ್‌ಎ/2012 ದಿನಾಂಕ: 24.08.2012ರ ಮಾನದಂಡಗಳನ್ವಯ ಹೊಸ ಪಡಿತರ ಚೀಟಿ ವಿತರಿಸಲಾಗುತ್ತದೆ. ಮಾನದಂಡಗಳನ್ವಯ ಪಡಿತರ ಚೀಟಿ ಪಡೆಯಲು ಸರ್ಕಾರವು ಆದೇಶಿಸಿರುತ್ತದೆ.

ಈ ಕೆಳಕಂಡ ಮಾನದಂಡಗಳಿಗೆ ಒಳಪಟ್ಟು ಕುಟುಂಬಗಳು ಬಿಪಿಎಲ್ ಪಡಿತರ ಚೀಟಿ ಪಡೆಯಲು ಅರ್ಹರಿರುವುದಿಲ್ಲ:

1) ಆದಾಯ ತೆರಿಗೆ ಪಾವತಿಸುವ ಸದಸ್ಯರನ್ನು ಒಳಗೊಂಡ ಎಲ್ಲಾ ಕುಟುಂಬಗಳು.
2) ಎಲ್ಲಾ ವರ್ಗದ ಸರ್ಕಾರಿ ನೌಕರರು.

3) ಸರ್ಕಾರಿ ಸ್ವಾಮ್ಯದ ಉದ್ಯಮಗಳು/ಮಂಡಳಿಗಳು/ನಿಗಮಗಳ ಖಾಯಂ ನೌಕರರು.

4) ಸ್ವಾಯತ್ತ ಸಂಸ್ಥೆಯ/ಮಂಡಳಿಗೆ ನೌಕರರು.

5) ಸಹಕಾರ ಸಂಘಗಳ ಖಾಯಂ ಸಿಬ್ಬಂದಿಗಳು.

6) ವೃತ್ತಿಪರ ವರ್ಗಗಳು:ವೈದ್ಯರುಗಳು, ಆಸ್ಪತ್ರೆಗಳ ನೌಕರರು, ವಕೀಲರುಗಳು, ಲೆಕ್ಕ ಪರಿಶೋಧಕರುಗಳು.

7) ಸೈಕಲ್ ಮೇಲೆ ಅಥವಾ ಗಾಡಿಗಳ ಮೇಲೆ ತಳ್ಳಿಕೊಂಡು ಅಥವಾ ರಸ್ತೆಯ ಪಕ್ಕದಲ್ಲಿ ಕುಳಿತು ವ್ಯಾಪಾರ ಮಾಡುವ ಮತ್ತು ತರಕಾರಿ ಮಾತ್ರ ವ್ಯಾಪಾರ ಮಾಡುವ ಹಾಗೂ ಗೂಡಂಗಡಿಗಳಲ್ಲಿ ವ್ಯಾಪಾರ ಮಾಡುವವರನ್ನು ಹೊರತುಪಡಿಸಿ, ಉಳಿದ ಎಲ್ಲಾ ವ್ಯಾಪಾರಸ್ಥರು.

8) 3 ಹೆಕ್ಟೇರ್ (7 1/2 ಎಕರೆ) ಒಣಭೂಮಿ ಅಥವಾ ತತ್ಸಮಾನ ನೀರಾವರಿ ಭೂಮಿ ಹೊಂದಿದವರು.

9) ಒಂದು ಆಟೋರಿಕ್ಷಾವನ್ನು ಹೊಂದಿ, ಸ್ವತ: ಓಡಿಸುತ್ತಿದ್ದು ಬೇರೆ ಆದಾಯದ ಮೂಲವಿಲ್ಲದವರನ್ನು ಹೊರತುಪಡಿಸಿ, 100 ಸಿ.ಸಿ.ಗೆ ಮೇಲ್ಪಟ್ಟ ಇಂಧನ ಚಾಲಿತ ವಾಹನಗಳನ್ನು (ದ್ವಿಚಕ್ರ, ತ್ರಿಚಕ್ರ, ಕಾರು ಇತ್ಯಾದಿ ವಾಹನ) ಹೊಂದಿರುವ ಸದಸ್ಯರನ್ನು ಒಳಗೊಂಡ ಕುಟುಂಬ.

10) ಅನುದಾನರಹಿತ ಕನ್ನಡ ಶಾಲೆಗಳ ನೌಕರರನ್ನು ಹೊರತುಪಡಿಸಿ ಅನುದಾನಿತ/ಅನುದಾನರಹಿತ ಶಾಲಾ ಕಾಲೇಜುಗಳ ನೌಕರರು.

11) ನೊಂದಾಯಿತ ಗುತ್ತಿಗೆದಾರರು, ಎ.ಪಿ.ಎಂ.ಸಿ. ಟ್ರೇಡರ್ಸ್/ ಕಮಿಷನ್ ಏಜೆಂಟ್ಸ್/ಬೀಜ ಮತ್ತು ಗೊಬ್ಬರ ಇತ್ಯಾದಿ ಡೀಲರ್ಸ್.

12) ಮನೆ, ಮಾಳಿಗೆ/ಕಟ್ಟಡಗಳನ್ನು ಬಾಡಿಗೆಗೆ ನೀಡಿ ವರಮಾನ ಪಡೆಯುವವರು.

13) ಪ್ರತಿ ತಿಂಗಳಿಗೆ ಸರಾಸರಿ ವಿದ್ಯುತ್ ಬಿಲ್ ರೂ. 450/–ಕ್ಕಿಂತ ಮೇಲ್ಪಟ್ಟು ಪಾವತಿಸುವ ಕುಟುಂಬಗಳು.

14) ಬಹುರಾಷ್ಟ್ರೀಯ ಕಂಪನಿ, ಉದ್ದಿಮೆ/ಕೈಗಾರಿಕೆಗಳ ನೌಕರರು.

ಊ) ನಿಪ್ಪಾಣಿ ಮತಕ್ಷೇತ್ರದಲ್ಲಿ ಈ ಹಿಂದೆ ಕರೆಯಲಾದ ಪಡಿತರ ಚೀಟಿ ಅರ್ಜಿಗಳಲ್ಲಿ ಪ್ರಸ್ತುತ ಯಾವುದು ಬಾಕಿ ಇರುವುದಿಲ್ಲ. 2013–14ನೇ ಸಾಲಿನಲ್ಲಿ ಅರ್ಜಿ ಸಲ್ಲಿಸಿದಂತಹವರು ತಮ್ಮ ಹಾಗೂ ತಮ್ಮ ಕುಟುಂಬದ ಸದಸ್ಯರ ಸಂಪೂರ್ಣ ಮಾಹಿತಿ ಹಾಗೂ ದಾಖಲೆಗಳನ್ನು ಸಲ್ಲಿಸದೇ ಇದ್ದ ಕಾರಣ ಅರ್ಜಿಗಳನ್ನು ತಿರಸ್ಕರಿಸಲಾಗಿದೆ.

ದಿನಾಂಕ 01.05.2015 ರಿಂದ ಹೊಸ ಪಡಿತರ ಚೀಟಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಸರ್ಕಾರ ಅವಕಾಶ ಕಲ್ಪಿಸಿದ್ದು, ನಿಪ್ಪಾಣಿ ಮತಕ್ಷೇತ್ರದಲ್ಲಿ 1879 ಬಿ.ಪಿ.ಎಲ್ ಹಾಗೂ 169 ಎ.ಪಿ.ಎಲ್ ಗಾಗಿ ಅರ್ಜಿಗಳು ದಿನಾಂಕ: 29.06.2015 ರವರೆಗೆ ಸ್ವೀಕರಿಸಿದ್ದು, ಸರ್ಕಾರದ ನಿರ್ದೇಶನದನುಸಾರ ಅರ್ಜಿಗಳ ಬಗ್ಗೆ ನ್ಯಾಯಬೆಲೆ ಅಂಗಡಿ ಮಟ್ಟದ ಅಧಿಕಾರಿಗಳಿಂದ ಪರಿಶೀಲಿಸಿ ಅರ್ಜಿದಾರರ ಅರ್ಹತೆಯ ಅನುಸಾರ ಹೊಸ ಪಡಿತರ ಚೀಟಿಗಳು ವಿತರಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

Details of No. of Existing Ration Cards, RCs ready for issue in Nippani Assembly Constituency of Belagavi Dist.

Sl No	Name of the Village	Details of RCs distributed			RC generated and ready for issue
		AAY	BPL	APL	
1	Nippani City	141	10571	1193	4249
2	BORGAON	134	3371	3287	54
3	BARWAD	65	576	185	50
4	AKKOL	102	1596	1461	38
5	BHOJ	40	1475	676	13
6	MANGUR	111	1129	761	1
7	HUNNARANI	52	752	680	8
8	GALATAGA	92	2411	811	43
9	SHIRGUPPI	59	838	821	122
10	YARNAL	35	486	510	60
11	GONDIKOPPI	16	265	215	40
12	SHENDUR	53	623	338	85
13	BUDALMUKH	13	230	227	16
14	GAVAN	22	267	284	7
15	TAVANDI	16	261	276	36
16	JATRAT	137	674	760	90
17	SHIRPEWADI	27	313	333	6
18	PADLIHAL	26	412	417	0

19	LAKHANAPUR	19	540	538	0
20	KODNI	61	692	638	52
21	BUDIHAL	40	396	394	25
22	SOUNDALAGA	12	1576	1340	278
23	BHIVASHI	17	548	557	48
24	ADI	41	704	714	36
25	NAGANUR	20	584	553	85
26	BHATNAGANUR	21	206	218	10
27	KURLI	85	606	1179	60
28	HADNAL	34	1233	347	3
29	YAMAGARNI	49	597	559	212
30	APPACHIWADI	28	457	475	10
31	KOGANOLLI	137	2768	2727	40
32	HANCHINAL K S	45	429	461	10
33	MATTIWADE	33	244	276	1
34	BENADI	183	1360	1275	80
35	BOLEWADI	44	219	260	10
36	SULAGAON	28	194	220	1
37	MAMADAPUR K L	40	654	678	14
38	KUNNUR	72	1108	1071	35
39	SHIVAPURWADI	18	215	189	2
40	GAJABARWADI	18	273	267	6

Sl No	Name of the Village	Details of RCs distributed			RC generated and ready for issue
		AAY	BPL	APL	
41	GAYAKANWADI	24	281	179	12
42	PANGERI B	45	241	356	74
43	MANAKAPUR	64	1366	1285	124
44	KARADAGA	75	1532	470	44
45	SHIRADWAD	75	500	150	18
46	BORGAONWADI	17	373	387	20
47	DONEWADI	58	624	669	15
48	KASANAL	32	247	274	2
49	BEDKIHAL	94	2148	2131	40
50	SIDNAL	64	594	634	16
Total		2734	49759	34706	6301

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್:– ಸನ್ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಒದಗಿಸಿದ್ದಾರೆ. ಹೊಸ ಪಡಿತರ ಚೀಟಿಯನ್ನು ಪಡೆಯಲು ಅನುಸರಿಸಬೇಕಾದ ಮಾನದಂಡಗಳು ಏನು ಎಂದಾಗ ಎಲ್ಲಾ ಉತ್ತರವನ್ನು ಕೊಟ್ಟಿದ್ದಾರೆ. ನನ್ನ ಕ್ಷೇತ್ರದಲ್ಲಿ ನೋಡಿದಾಗ ಈ ಒಂದು ಪಡಿತರ ಚೀಟಿಗಳ ಬಗ್ಗೆ ಬಹಳ ಗಂಭೀರವಾದ ವಿಷಯವಾಗಿದೆ. ಯಾವ ಮಾನದಂಡಗಳ ಮೇಲೆ ಈ ಒಂದು BPL ಕಾರ್ಡ್ ಫಲಾನುಭವಿಗಳಿದ್ದಾರೋ ಅವರ ಎಲ್ಲಾ ಕಾರ್ಡುಗಳು ಹೆಚ್ಚಿನ ಪ್ರಮಾಣದಲ್ಲಿ APL cards ಆಗಿವೆ ಮತ್ತು APL ಕಾರ್ಡುದಾರರದು BPL ಆಗಿರುವುದರಿಂದ ಪ್ರತಿದಿನವೂ ಜನ ಆಫೀಸಿಗೆ ಬಂದು ಹೇಳುತ್ತಾರೆ. ಒಂದು ಆರೋಗ್ಯದ ಸಮಸ್ಯೆ ಇರಬಹುದು, ಬಡತನದ ಪರಿಸ್ಥಿತಿ ಇರಬಹುದು. ಹೀಗಾಗಿ ಅವರು ತೊಂದರೆಗೊಳಗಾಗಿ ಅವರು ಪ್ರತಿದಿವಸವೂ ಆಫೀಸಿನಲ್ಲಿ ಬಂದು ಗೋಳಾಡುತ್ತಾರೆ. ಎರಡನೆಯದಾಗಿ, ನಮ್ಮದು ಪಡಿತರ ಚೀಟಿ ತೆಗೆದುಕೊಳ್ಳುವುದಕ್ಕೆ ಚಿಕ್ಕೋಡಿ ತಹಶೀಲ್ದಾರ್ ಆಫೀಸಿಗೆ ಹೋಗಬೇಕಾಗುತ್ತದೆ. ಅಲ್ಲಿ ಕ್ಯೂನಲ್ಲಿ ಎಂಟು ದಿವಸಗಳ ಕಾಲ ನಿಂತರೂ ಕೂಡ ಪಡಿತರ ಚೀಟಿ ಸಿಗುವುದಿಲ್ಲ. ಆದರೆ ಒಂದು ಉದಾಹರಣೆ ಮತ್ತು proof ಸಮೇತ ನಾನು ತೋರಿಸುತ್ತೇನೆ.

ಅಧ್ಯಕ್ಷರು:– ಅದಕ್ಕೆ ಏನು ಮಾಡಬೇಕು ಹೇಳಿ?

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್:– ಅಲ್ಲಿ 5,000–00 ರೂಪಾಯಿಗಳನ್ನು ಕೊಟ್ಟ ತಕ್ಷಣ ಫೋಟೋ, thumb ಯಾವುದನ್ನು ಕೇಳದೇನೆ ಪಡಿತರ ಚೀಟಿಯನ್ನು ವಿತರಣೆ ಮಾಡಿದ್ದಾರೆ. ಅದಕ್ಕೆ ನಾನು Food Inspector ಅನ್ನು ಕರೆದು meeting ಮಾಡಿ ಕೇಳಿದಾಗ ಅವರೇನು ಉತ್ತರ ಕೊಟ್ಟರೆಂದರೆ, ಇದಕ್ಕೂ ನನಗೂ ಏನೂ ಸಂಬಂಧವಿಲ್ಲ, ಅಲ್ಲಿ thumb ತೆಗೆದುಕೊಳ್ಳುವಂಥ ಅಧಿಕಾರಿಗಳು ಅದನ್ನು ತೆಗೆದುಕೊಂಡಿರಬಹುದು ಎಂದು ಹೇಳಿದರು. ಆದರೆ ಇಷ್ಟು ಬೇಜವಾಬ್ದಾರಿತನ ಇದೆ ಎಂದರೆ ಆ ಎಲ್ಲಾ ಜವಾಬ್ದಾರಿ ಕೂಡ ಅಲ್ಲಿರತಕ್ಕಂಥ ತಹಶೀಲ್ದಾರ್ ಆಫೀಸ್‌ನಲ್ಲಿರುವಂಥ ಎಲ್ಲಾ

ಜವಾಬ್ದಾರಿ ಅಧಿಕಾರಿಗಳಿಗೆ ಹೋಗುತ್ತದೆ. ಆದ್ದರಿಂದ ಇದಕ್ಕೆ ಒಂದು ಯೋಗ್ಯ ಕ್ರಮವನ್ನು ತೆಗೆದುಕೊಳ್ಳಬೇಕು. ದುಡ್ಡು ತೆಗೆದುಕೊಂಡು ಪಡಿತರ ಚೀಟಿ ವಿತರಣೆ ಆಗುತ್ತಿರುವುದನ್ನು ತಡೆಗಟ್ಟಬೇಕು. ಇನ್ನೊಂದು ನನ್ನ ಹಳ್ಳಿಯಿಂದ ಚಿಕ್ಕೋಡಿಗೆ ಹೋಗುವ ಜನ ಸುಮಾರು 20–25 ಕಿ.ಮೀ. ಆಗುತ್ತದೆ. ಅಲ್ಲಿ ಅವರು thumb ಕೊಟ್ಟು, ಫೋಟೋ ಕೊಡುವುದಕ್ಕೆ ಬಹಳಷ್ಟು ವ್ಯತ್ಯಯ ಆಗುತ್ತದೆ. ಅದಕ್ಕೆ ನಾನು ನಿಪ್ಪಾಣಿ ತಹಶೀಲ್ದಾರ್ ಆಫೀಸಿನಲ್ಲಿ ಆ ವ್ಯವಸ್ಥೆಯನ್ನು ಒಂದು ವಿಶೇಷ ಕಾರ್ಯಕ್ರಮವೆಂದು ಅಲ್ಲಿ ಮುಂದುವರೆಸಬೇಕು.

ಅಧ್ಯಕ್ಷರು: ಆಯಿತು, ಸಚಿವರು ಉತ್ತರ ಹೇಳಿ.

ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ರಾಜ್ಯ ಸಚಿವರು):– ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಶಾಸಕರು ಕೇಳಿರುವಂಥ ಪ್ರಶ್ನೆಗಳಲ್ಲಿ ಈ ಪಡಿತರ ಕಾರ್ಡುಗಳನ್ನು online ಮೂಲಕ ನೋಂದಣಿ ಮಾಡಿಕೊಳ್ಳುವಂಥದ್ದು ಅದು ಗ್ರಾಮ ಪಂಚಾಯಿತಿಗಳಲ್ಲಿಯೂ ಮಾಡಿಕೊಳ್ಳಬಹುದು. ನಗರ ಪ್ರದೇಶಗಳಲ್ಲಿರುವವರು ಆಗ ಅವರು ತಾಲ್ಲೂಕು ಕಛೇರಿಗೆ ಹೋಗಬೇಕೆಂದು ಹೇಳಿದ್ದಾರೆ. ಆದ್ದರಿಂದ ಅಲ್ಲಿ ಏನಾದರೂ ಕೊರತೆ ಆಗುತ್ತಿದ್ದರೆ ಅದರ ಬಗ್ಗೆ ನಾನು ಪರಿಶೀಲನೆ ಮಾಡುತ್ತೇನೆ. ನನಗೆ ಪ್ರತ್ಯೇಕವಾಗಿ ಮಾಹಿತಿ ಕೊಡಿ. ಅದಕ್ಕೆ ಎಲ್ಲಿ ಸಮಸ್ಯೆ ಆಗುತ್ತಿದೆ, ಅದನ್ನು ಸರಿಪಡಿಸುವಂಥ ವ್ಯವಸ್ಥೆ ಮಾಡಬಹುದು. ಇನ್ನೊಂದು ಏನೆಂದರೆ ನಾವು online ಮೂಲಕ thumb, biometric ಮತ್ತು ಭಾವಚಿತ್ರಗಳನ್ನು ತೆಗೆದುಕೊಳ್ಳುವುದು ಕಡ್ಡಾಯ ಮಾಡಲಾಗಿದೆ. ಅದನ್ನು ಎಲ್ಲರೂ ತೆಗೆದುಕೊಳ್ಳಬೇಕಾಗುತ್ತದೆ. ಅದು ಇಲ್ಲದೇನೆ ಯಾರೂ ಕೂಡ ಪಡಿತರ ಕಾರ್ಡುಗಳನ್ನು ವಿತರಣೆ ಮಾಡಲಿಕ್ಕಾಗುವುದಿಲ್ಲ.

ಅಧ್ಯಕ್ಷರು:– ಅದಕ್ಕೆ ಅವರು ಅಲ್ಲಿಗೆ ಹೋಗುವುದಕ್ಕಾಗುವುದಿಲ್ಲ, ಅದನ್ನು ಸರಿಪಡಿಸಿ ಎಂದು ಕೇಳುತ್ತಿದ್ದಾರೆ.

ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ರಾಜ್ಯ ಸಚಿವರು):– ಆ ರೀತಿ ಸಮಸ್ಯೆ ಇದ್ದರೆ ಅದನ್ನು ಸರಿಪಡಿಸಿಕೊಡುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ:– ಹಣ ತೆಗೆದುಕೊಂಡಿದ್ದಾರೆಂದು ನೇರವಾಗಿ ಆರೋಪ ಮಾಡಿದ್ದಾರೆ. ಹಾಗಾಗಿ ಅವರು ಯಾರಿದ್ದಾರೋ ಅವರನ್ನು suspend ಮಾಡಿ.

ಶ್ರೀ ದಿನೇಶ್ ಗುಂಡೂರಾವ್: ಯಾರು ಹಣ ತೆಗೆದುಕೊಂಡಿದ್ದಾರೆ, ಅವರ ಬಗ್ಗೆ ಸರಿಯಾಗಿ ದೂರು ಕೊಟ್ಟರೆ ಅವರ ಮೇಲೆ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ:– ಮೊದಲು ಅವರನ್ನು ಸಸ್ಪೆಂಡ್ ಮಾಡಿ. ವಿಧಾನಸಭೆಯಲ್ಲಿ ಚರ್ಚೆ ಮಾಡಿದರೂ ಏನೂ ಆಗಲಿಲ್ಲವೆಂದು ಕೋಡು ಬರುತ್ತವೆ.

ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ರಾಜ್ಯ ಸಚಿವರು):– ಅವರು ಸ್ಪಷ್ಟವಾಗಿ ಆರೋಪದ ಬಗ್ಗೆ ಹೇಳಿದರೆ ಅವರ ಮೇಲೆ ಖಂಡಿತ ಕ್ರಮ ಕೈಗೊಳ್ಳುತ್ತೇವೆ. ಅವರ ಆರೋಪದಲ್ಲಿ ಸ್ಪಷ್ಟತೆ ಇರಬೇಕು.

ಶ್ರೀಮತಿ ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ್:– ನಾನು ಸಾಕ್ಷಿ ಸಮೇತ ತಂದಿದ್ದೇನೆ. ನಾನು ಅದನ್ನು ತಮಗೆ ಕೊಡುತ್ತೇನೆ. ಅದರ ಮೇಲೆ ತಾವು ಆ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳಬಹುದು.

ಶ್ರೀ ದಿನೇಶ್ ಗುಂಡೂರಾವ್:– ನಮಗೆ ಕೊಡಿ, ಆ ದೂರುಗಳೇನಿವೆ, ಅದರ ಮೇಲೆ ಖಂಡಿತ ಕ್ರಮ ಕೈಗೊಳ್ಳುತ್ತೇವೆ.

ಅಧ್ಯಕ್ಷರು:– ಮಾನವ್ಪ ಡಿ.ವಜ್ಜಲ್ ಗೈರು ಹಾಜರಿ, ವಸಂತ ಬಂಗೇರ ಇಲ್ಲ. ರವಿಸುಬ್ರಹ್ಮಣ್ಯ ಎಲ್.ಎ. ಪ್ರಶ್ನೆ ಕೇಳಿ.